ಕಸರತ್ತುಗಳು ಒಂದೆರೆಡಲ್ಲ. ತಾನು ಮೆಚ್ಚಿದವಳು ಒಲಿದು ಪ್ರೀತಿ ಅಂಕುರಿಸಿದರೆ ಪ್ರತಿದಿನವೂ ವಸಂತಕಾಲ. ಈ ಜೋಡಿಗಳು ಗುಂಪಿನಿಂದ ಬೇರ್ಪಟ್ಟು ತಮ್ಮ ಮಾತುಕತೆಗೆ ಪ್ರಶಸ್ತವಾದ ಸ್ಥಳವನ್ನು ನಿಲ್ದಾಣದಲ್ಲಿ ಹುಡುಕಿಕೊಳ್ಳುತ್ತವೆ. ಕಾಲ ಎಷ್ಟೇ ಬದಲಾದರೂ ನಿಲ್ದಾಣಗಳ ಬದಲಾಗದ ಈ ದೃಶ್ಯ ಕಾಲಕ್ಕೊಡ್ಡಿದ ಸವಾಲಿನಂತೆ ತೋರುತ್ತದೆ.

ಬಸ್‌ಸ್ಟಾಂಡ್‌ಗಳು ನಿಜವಾಗಿಯೂ ತಂಗುದಾಣಗಳೇ ಹೌದು. ಅನಾಥರು, ಭಿಕ್ಷುಕರು, ಕುಡುಕರು, ತಮ್ಮ ಊರಿನ ಕೊನೆಯ ಬಸ್ಸನ್ನು ತಪ್ಪಿಸಿಕೊಂಡವರ ನಿವಾಸಿ ತಾಣಗಳೇ ಆಗಿವೆ. ನಿಲ್ದಾಣಗಳ ಕೆಲವು ಮೂಲೆಗಳು ಭಿಕ್ಷುಕರ ಕಾಯಂ ಶಯನ ತಾಣಗಳು. ಅದನ್ನು ಯಾರಾದರೂ ಹೊಸಬರು ಆಕ್ರಮಿಸಿಕೊಂಡರೆ ಅದಕ್ಕಾಗಿ ಮಹಾಯುದ್ಧಗಳೇ ನಡೆಯುತ್ತವೆ. ನಿಲ್ದಾಣಗಳನ್ನೇ ಆಶ್ರಯ ತಾಣಗಳನ್ನಾಗಿಸಿಕೊಂಡ ಇಲ್ಲಿನ ಕಾಯಂ ನಿವಾಸಿಗಳು ಎಂದಿಗೂ ತಮ್ಮ ಸ್ಥಾನಪಲ್ಲಟ ಮಾಡುವುದಿಲ್ಲ. ಯಾವ ಅತಿಕ್ರಮಣವೂ ಇಲ್ಲದ ಸಾಮರಸ್ಯ ಮನೋಭಾವ ಇಲ್ಲಿದೆ. ಅನ್ಯರ ಆಕ್ರಮಣವಾದರೆ ಅದನ್ನು ಒಗ್ಗಟ್ಟಿನಿಂದ ಹಿಮ್ಮೆಟ್ಟಿಸುವರು. ಹೊಸಬರು ಯಾರಾದರೂ ನಿಲ್ದಾಣದ ಬೆಂಚಿನಲ್ಲಿ ಮಲಗಿದ್ದರೆ ರಾತ್ರಿ ಬೀಟಿನ ಪೊಲೀಸರ ಲಾಠಿಯೇಟಿನ ರುಚಿಯನ್ನು ಅನುಭವಿಸುತ್ತಾರೆ. ಆದರೆ ಕಾಯಂ ನಿವಾಸಿಗಳಿಗೆ ಲಾಠಿ ಏಟಿನಿಂದ ವಿನಾಯಿತಿ ಇದೆ. ಪೊಲೀಸರು ಇವರ ನಡುವೆ ಏರ್ಪಟ್ಟ ಅಲಿಖಿತ ಒಪ್ಪಂದವಿದು. ಇದು ನಿಜದ ಅರ್ಥದಲ್ಲಿ ತಂಗುದಾಣವಾಗುವುದು.

ಮನುಷ್ಯರು ತಂಗುವ ತಾಣವಷ್ಟೇ ಅಲ್ಲ. ಸೊಳ್ಳೆ, ನೊಣ, ಇಲಿ, ಹೆಗ್ಗಣ ಸೇರಿದಂತೆ ಹಲವು ಜೀವಿಗಳ ಆವಾಸತಾಣವೂ ಹೌದು. ನಿಮಗೆ ಸಾವಿಲ್ಲದ ಮನೆಯ ಸಾಸಿವೆಯಾದರೂ ಸಿಗಬಹುದು. ಸೊಳ್ಳೆ, ನೊಣಗಳಿಲ್ಲದ ನಿಲ್ದಾಣಗಳು ಸಿಗುವುದಿಲ್ಲ. ಹಗಲು, ರಾತ್ರಿಗಳ ತಾರತಮ್ಯವಿಲ್ಲದೆ ದುಡಿಯುವ ಶ್ರಮಿಕರು ಈ ಕ್ರಿಮಿಗಳು. ನನಗೆ ಪರಿಚಿತವಾದ ನಿಲ್ದಾಣವೊಂದರಲ್ಲಿ ಶಿಥಿಲವಾದ ಹಳೆಯ ಕಟ್ಟಡವಿತ್ತು. ಹಂಚಿನ ಮಾಡಿನಿಂದ ಅಲಂಕೃತವಾದ ಇದು ನಿಲ್ದಾಣದ ಗತವೈಭವದ ಕುರುಹಾಗಿತ್ತು. ಕುಡುಕರು, ನಾಯಿಗಳು, ದನಗಳು ಇದರ ಕಾಯಂ ಸದಸ್ಯರಾಗಿದ್ದರು. ಇಲ್ಲಿ ಇಲಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದವು. ನಂತರ ಇದು ಇಲಿಯನ್ನು ಹುಡುಕಿ ಬರುವ ಹಾವುಗಳ ಕಾಯಂ ತಾಣವಾಯಿತು. ಹೀಗೆ ಹಲವು ಜೀವಿಗಳಿಗೆ ಆಶ್ರಯ ನೀಡಿ, ಸಕಲ ಜೀವಿಗಳಿಗೆ ದಯೆಯನ್ನು ತೋರುವ ತಾಣವೂ ಅದಾಗಿದೆ.

ನಾವೊಮ್ಮೆ ಹೊಸಪೇಟೆಯ ಬಸ್‌ನಿಲ್ದಾಣದಲ್ಲಿ ರಾತ್ರಿ ಕಮಲಾಪುರಕ್ಕೆ ಹೋಗುವ ಕೊನೆಯ ಬಸ್ಸಿಗೆ ಕಾಯುತ್ತ ಹರಟುತ್ತ ನಿಂತಿದ್ದೆವು. ರಾತ್ರಿ ಹತ್ತರ ಹೊತ್ತಿಗೆ ನಿಲ್ದಾಣದಲ್ಲಿ ಸ್ತ್ರೀಯ ಜೋರು ದನಿ ಕೇಳಿತು. ನಾವಲ್ಲಿಗೆ ಹೋಗುವ ಹೊತ್ತಿಗೆ ಹತ್ತಾರು ಕೈಗಳಿಂದ ಒದೆ ತಿಂದ ಜೀವವೊಂದು ತೇಲುಗಣ್ಣಿಂದ ನೆಲದ ಮೇಲೆ ಬಿದ್ದಿತ್ತು. ಏನೆಂದು ಅಲ್ಲಿರುವವರನ್ನು ವಿಚಾರಿಸಿದಾಗ ತಿಳಿದ ಸಂಗತಿಯೆಂದರೆ, ಈ ವಿಟಪುರುಷ ಆ ಹೆಣ್ಣನ್ನು 'ಬರ್ತೀಯಾ' ಎಂದು ಕರೆದು ಅಸಭ್ಯವಾಗಿ ವರ್ತಿಸಿ ಪೆಟ್ಟು ತಿಂದಿದ್ದ. ನಂತರ ಅಲ್ಲಿಯೇ ಚೌಕಿಯಲ್ಲಿದ್ದ ಪೊಲೀಸರ ಅತಿಥಿಯಾಗಿ ತೆರಳಿದ. ನಿಲ್ದಾಣವನ್ನು ಕರವೇಣ್ಣುಗಳು ಹೊಟ್ಟೆಪಾಡಿಗಾಗಿ ಅವಲಂಬಿಸಿದ ನಿದರ್ಶನಗಳು ಇವೆ. ಕೆಲವು ನಿಲ್ದಾಣಗಳು ರಾತ್ರಿ ಹೊತ್ತು ಸಭ್ಯರು ಕಾಲಿಡಲು ಭೀತಿ ಮೂಡಿಸುವಂತಿರುವುದು ಸುಳ್ಳಲ್ಲ. ಆದರೆ ಇದು ನಿಲ್ದಾಣಗಳ ಕೀರ್ತಿಗೆ ಮಸಿ ಬಳಿದಂತಿಲ್ಲ. ವಿಟರನ್ನು ಆಹ್ವಾನಿಸಲು ಕರವೇಣ್ಣುಗಳಿಗೆ ನಿಲ್ದಾಣಗಳಿಗಿಂತ ಪ್ರಶಸ್ತವಾದ ಸ್ಥಳವಿಲ್ಲ. ಅವರನ್ನು ಆ ಸ್ಥಿತಿಯಲ್ಲಿ ಇಟ್ಟ ಸಮಾಜ, ನಾವುಗಳು ಅದರ ಹೊಣೆಗಾರರಲ್ಲವೆ? ಹಾಗಾಗಿ ಇದು ಸಹ್ಯ. ನೀರಿನ ಬಳಿಯ ಕೆಸರಂತೆ ಇದನ್ನು ಸಹಜವಾಗಿ ಸ್ವೀಕರಿಸಿದ ಪಯಣಿಗರ ಉದಾರತೆಯನ್ನು ಮೆಚ್ಚಬೇಕು.

ಒಮ್ಮೆ ಚಲಿಸುವ ಬಸ್ಸನ್ನು ಹತ್ತಲು ಹೋಗಿ ವ್ಯಕ್ತಿಯೊಬ್ಬರು ಕೆಳಕ್ಕೆ ಬಿದ್ದರು. ಆ ಕ್ಷಣದಲ್ಲಿಯೇ ನಿಲ್ದಾಣ ಆಸ್ಪತ್ರೆಯಾಗಿ ಬದಲಾಯಿತು. ಬಿದ್ದವರಿಗೆ ನೀರು ಕುಡಿಸುವವರು, ಟವೆಲ್‌ನಲ್ಲಿ ಗಾಳಿ ಹಾಕುವವರು, ಕೆಲವು ಯುವಕರು 108ಕ್ಕೆ ಕರೆ ಮಾಡಿ ವಿಷಯ ಮುಟ್ಟಿಸಿದ್ದರು. ಇವರಾರು ಆ ವ್ಯಕ್ತಿಯ ಬಂಧುಗಳೋ, ಊರಿನವರೋ, ಜಾತಿಯವರೋ ಅಲ್ಲ. ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ಮಿಡಿಯುವ ಈ ಮಾನವೀಯ ಗುಣ ಇಂದಿಗೂ ಪೂರ್ತಿ ಕಣ್ಮರೆಯಾಗಿಲ್ಲ. ಹೀಗೆ ನಿಲ್ದಾಣಗಳು ನೈಜವಾದ ಜಾತ್ಯತೀತ, ಮತಾತೀತ ಮಾನವೀಯ ತಾಣಗಳಾಗಿರುವುದು ನಿಮ್ಮ ಅನುಭವಕ್ಕೂ ಬಂದಿರಬಹುದು.

ನಿಲ್ದಾಣಗಳು ವಧೂವರರ ನೋಡುವ, ನಿಶ್ಚಯಿಸುವ ತಾಣಗಳಾಗುವುದು ಬಹುಶಃ ನಿಮಗೆ ತಿಳಿದಿರಲಿಕ್ಕಿಲ್ಲ. ನನ್ನ ಗೆಳೆಯೊಬ್ಬರ ಅನುಭವವನ್ನು ನಿಮಗೆ ಹೇಳುವೆ. ನನ್ನ ಸ್ನೇಹಿತರ ತಂದೆ ಒಮ್ಮೆ ಬಸ್ಸಿಗೆ ಕಾಯುತ್ತ ನಿಲ್ದಾಣದಲ್ಲಿ ಕುಳಿತಿದ್ದರು. ಆಗ ಪಕ್ಕದಲ್ಲಿ ಕುಳಿತ ತರುಣಿಯೊಂದಿಗೆ 'ಏನು ಓದ್ತಾ ಇದೀಯಾ?' ಎಂಬ ಕುಶಲದೊಂದಿಗೆ ಮಾತುಕತೆ ಶುರುವಾಯಿತು. ಈ ಮಾತುಕತೆ ಯಾವೂರು, ಅಲ್ಲಿ ಯಾರ ಪೈಕಿ ಎಂಬ ಪ್ರಶ್ನೆಗಳಿಂದ ಮುಂದುವರಿಯಿತು. ಯಾರ ಪೈಕಿ ಎಂಬ ಪ್ರಶ್ನೆಯ ಮುಖ್ಯ ಉದ್ದೇಶ ಜಾತಿಯನ್ನು ತಿಳಿಯುವುದು. ಜಾತಿ ತಿಳಿದಾದ ಮೇಲೆ ಸಣ್ಣಗೆ ಅಂಕುರಿಸಿದ ಬೀಜವೊಂದು ಮುಂದೆ ವೈವಾಹಿಕ ಸಂಬಂಧದಲ್ಲಿ ಕೊನೆಗೊಂಡಿತು. ನನ್ನ ಗೆಳೆಯನ ಕನ್ಯೆಯನ್ನು ನೋಡುವ ಶಾಸ್ತ್ರಕ್ಕೆ ನಿಲ್ದಾಣ ವೇದಿಕೆಯಾಗಿತ್ತು. ಉಪ್ಪಿಟ್ಟು ಚಹಗಳ ಆತಿಥ್ಯದ ಗಡಿಬಿಡಿ ಇಲ್ಲದೆ ಕನ್ಯೆ ನೋಡುವ ಕ್ರಿಯೆ ಮುಗಿದಿತ್ತು. ಇದು ಬಸ್ಸಿಗೆ ಕಾಯುತ್ತ ಕುಳಿತ ಅವಳ ಗಮನಕ್ಕೂ ಬಂದಿರಲಿಲ್ಲ. ಪ್ರೇಮಿಗಳನ್ನು ಮಾತ್ರವಲ್ಲ, ವಿವಾಹದ ನಂಟನ್ನು ಬೆಸೆದ ಕೀರ್ತಿಯು ನಿಲ್ದಾಣದ ಮುಡಿಗೇರಿತು.

ಒಮ್ಮೆ ಬಸ್‌ನಿಲ್ದಾಣ ಕದನ ಕಣವಾಗಿ ಬದಲಾದ ಸನ್ನಿವೇಶವೊಂದು ನೆನಪಿನಲ್ಲಿ ಮಾಸದಂತೆ ಉಳಿದಿದೆ. ಬಸ್ ಹತ್ತುವಾಗ ಕಾಲನ್ನು ತುಳಿದರು ಎಂಬ ಸಣ್ಣ ಕಿಡಿಯಿಂದ ಹತ್ತಿಕೊಂಡ ಜಗಳವಿದು. ಪರಸ್ಪರ ಎರಡು ಬಣಗಳ ಕದನವಾಗಿ ಮಾರ್ಪಾಡಾಗಿ ರಕುತ ತರ್ಪಣವಾಯಿತು. ಒಂದೇ ಊರಿನ ಎರಡು ಬಣಗಳ ಆಸ್ತಿ ವಿಷಯಕ್ಕೆ ಶುರುವಾದ ಜಗಳವಿದು. ನಂತರ ಪೊಲೀಸ್ ಠಾಣೆಯಲ್ಲಿ ಆ ಕ್ಷೇತ್ರದ ಎಮ್ಮೆಲ್ಲೆಯ ಮಾತಿಗೆ ಬೆಲೆಕೊಟ್ಟು ಬಲವಂತದ ರಾಜಿಯಾಗಿ ಊರಿಗೆ ತೆರಳಲು ನಿಲ್ದಾಣಕ್ಕೆ ಬಂದಿದ್ದರು. ರಾಜಿಯಾದರೂ ಒಳಗಿನ ಕಿಡಿ ನಂದಿರಲಿಲ್ಲ. ಕಾಲು ತುಳಿದರು ಎಂಬ ಕುಂಟುನೆಪದಿಂದ ಒಳಗಿನ ಕಿಡಿ ಸ್ಫೋಟಿಸಿತು. ಇದನ್ನು ತಿಳಿಯದ ಅಮಾಯಕ ಪಯಣಿಗರು ಜಗಳ ಬಿಡಿಸಲು ಹೋಗಿ ಪೆಟ್ಟು ತಿನ್ನಬೇಕಾಯಿತು. ಈ ಕಾಳಗಕ್ಕೆ ನಿಲ್ದಾಣದ ಸುತ್ತಮುತ್ತ ಸಿಕ್ಕ ಸಾಮಗ್ರಿಗಳೇ ಆಯುಧಗಳಾದವು. ಈ ಜಗಳಕ್ಕೆ ಬಸ್ಸಿನ ಬಾಗಿಲು ಬಲಿಯಾಯಿತು. ಕಿಟಕಿ ಗ್ಲಾಸ್‌ಗಳು ಹುಡಿಯಾದವು. ಜನರ ಕೂಗಾಟ ನರಳಾಟದಿಂದ ಕ್ಷಣಾರ್ಧದಲ್ಲಿ ರಣಾಂಗಣವಾಗಿ ರಕ್ತ ಚೆಲ್ಲಿತು. ಈ ಜಗಳಕ್ಕೆ ಸಂಬಂಧಪಡದ ಪಯಣಿಗರೊಬ್ಬರು ಪೊಲೀಸರಿಗೆ ವಿಷಯ ಮುಟ್ಟಿಸಿ ಜಗಳದ ಅಂತ್ಯಕ್ಕೆ ಕಾರಣವಾದರು. ಈ ಕದನ ನಡೆದು ಸುಮಾರು ಗಂಟೆಗಳು ಕಳೆದರೂ ನಿಲ್ದಾಣವನ್ನು ಆವರಿಸಿದ್ದ ತಲ್ಲಣ ಹಾಗೇ ಇತ್ತು. ನಂತರ ನೆರೆದ ಸಮೂಹ ಸರಿ–ತಪ್ಪುಗಳ ಜಿಜ್ಞಾಸೆಯಲ್ಲಿ ಮುಳುಗಿತು. ಈ ಜಗಳದಲ್ಲಿ ಯಾವ ಪಾತ್ರವನ್ನೂ ವಹಿಸದ ನಿಲ್ದಾಣದ ಕುರ್ಚಿ, ಬಸ್ಸಿನ ಬಾಗಿಲು, ಕಿಟಕಿ ಬಲಿಯಾದವು.

ಈ ನಿಲ್ದಾಣಗಳಲ್ಲಿ ಜಗಳಕ್ಕಿಂತಲೂ ತಾರಕ ಸ್ವರದ ಧ್ವನಿಗಳು ಪ್ರತಿ ದಿನವೂ ಮೊಳಗುತ್ತವೆ. ಇದು ಯಾವತ್ತೂ ತಲ್ಲಣವನ್ನು, ಭೀತಿಯನ್ನು ಸೃಷ್ಟಿಸಿಲ್ಲ. ಈ ದನಿಗಳು ಹೊಟ್ಟೆಪಾಡಿಗಾಗಿ ಸೃಷ್ಟಿಯಾದ ಸ್ವರಗಳಾಗಿವೆ. ಆಯಾಯ ಋತುಮಾನಕ್ಕೆ ಸಿಗುವ ಹಣ್ಣುಗಳು, ನೆಲಗಡಲೆ, ಬಾಚಣಿಕೆ, ಕನ್ನಡಕ, ಪರ್ಸ್ — ಹೀಗೆ ತರಹೇವಾರಿ ವಸ್ತುಗಳನ್ನು ಕೈಯಲ್ಲಿ ಹೊತ್ತು ಮಾರುತ್ತಾರೆ. ಈ ವಸ್ತುಗಳಂತೆಯೇ ಇವರದು ತರಹೇವಾರಿ ಸ್ವರಗಳು. ಒಬೊಬ್ಬರದು ಒಂದು ರಾಗ. ಇವರು ವಸ್ತುವನ್ನು ಮಾರಾಟ ಮಾಡಲು ಏಕೆ ಸಹಜವಾದ ಮಾತಿನ ಕಾಕುವನ್ನು ಬಳಸುವುದಿಲ್ಲ ಎಂಬ ಯಕ್ಷಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟ. ಹೀಗೆ ವಿಭಿನ್ನ ಸ್ವರದಿಂದ ಕೂಗಿ ಗ್ರಾಹಕರನ್ನು ಸೆಳೆಯುವ ಉದ್ದೇಶವಿರಬಹುದು.

ಇಂದಿನ ಜಾಹೀರಾತು ಪ್ರಪಂಚದಲ್ಲಿ ಸುಂದರ ನಟಿಯೊಬ್ಬಳು ವೈಯಾರದಿಂದ 'ಈ ಕ್ರೀಮ್ ಅನ್ನು ಬಳಸಿದರೆ ನಿಮ್ಮ ಮುಖ ಫಳಫಳ ಹೊಳೆಯುತ್ತದೆ' ಎಂದು ಉಲಿಯುತ್ತಾಳೆ. ಹೀಗೆ ನಮ್ಮ ಗಮನವನ್ನು ಸೆಳೆದು ತನ್ನ ಉತ್ಪನ್ನ ಮಾರುವುದಿಲ್ಲವೆ? ಅದಕ್ಕೆ ಮರುಳಾಗಿ ನಾವು ಕೊಂಡುಕೊಳ್ಳುತ್ತೇವೆ. ಎಷ್ಟೇ ಕ್ರೀಮು ಹಚ್ಚಿದರು ನಮ್ಮ ಮೊಗವೇನು ಬದಲಾಗದು ಎನ್ನುವ ಸತ್ಯ ಅರಿಯುವ ಹೊತ್ತಿಗೆ ಉತ್ಪನ್ನ ತಯಾರಿಸಿದ ಕಂಪನಿಯ ತಿಜೋರಿ ತುಂಬಿರುತ್ತದೆ. ಇವರು ಮಂಕುಬೂದಿ ಎರಚುವ ತಂತ್ರಕ್ಕೆ ನಿಲ್ದಾಣಗಳ ಕೂಗೇ ಮೂಲವಿರಬಹುದೆ ಎಂಬ ಸಂಶಯ ನನಗಿದೆ. ಆದರೆ, ಹೊಟ್ಟೆಪಾಡಿಗೆ ಹುಟ್ಟಿಕೊಂಡ ನಿಲ್ದಾಣದ ಹಾಡುಹಕ್ಕಿಗಳ ಕೂಗಿನಲ್ಲಿ ವಂಚನೆಯ ಉದೇಶವಿಲ್ಲ. ಈ ಜಾಹೀರಾತು ಕಂಪನಿಗಳಂತೆ ಇವರು ನಮ್ಮನ್ನು